<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 140/2024**

| ಸಾಕ್ಷಿಯ ಹೆಸರು | ಶ್ರೀ ನಿರಂಜನ್ ಬಾಬು | ಚಾಸಾಃ | ಫ್ರಾಸಾಃ |
|---|---|---|---|
| ತಂದೆಯ ಹೆಸರು | ಸಿದ್ದಗಂಗಯ್ಯ | 2 | 3 |
| ವಯಸ್ಸು | 38 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **17.03.2026.** | |
| ಉದ್ಯೋಗ | ಡ್ರೈವರ್ | | |
| ವಾಸ ಸ್ಥಳ | ಅರಳೇದಿಬ್ಬ | | |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

ಆರೋಪಿತರು ಗೊತ್ತಿಲ್ಲ. ಚಾ ಸಾ 1 ಮತ್ತು ನಾನು ಒಂದೇ ಊರಿನವರು. 2018 ರಲ್ಲಿ ನಾನು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ. ಪಿರ್ಯಾದಿ ಆ ಸಮಯದಲ್ಲಿ ಕೋಳಿ ಅಂಗಡಿ ಇಟ್ಟುಕೊಂಡಿದ್ದರು. ಆರೋಪಿತರು ಏನು ಮಾಡುತ್ತಿದ್ದರು ಎಂದು ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ಏನು ಗೊತ್ತಿಲ್ಲ. ಆರೋಪಿತರು ರಾಜು ಅವರ ಜೊತೆ ಗಲಾಟೆ ಮಾಡಿದ್ದನ್ನು ನೋಡಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಈಗ ನನಗೆ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದ್ದು, ಅದನ್ನು ನಿಶಾನೆ ಪಿ7 ಎಂದು, ಸಹಿಯನ್ನು ನಿಶಾನೆ ಪಿ7(ಎ) ಎಂದು ಗುರುತಿಸಲಾಯಿತು. ಈಗ್ಗೆ 8-9 ವರ್ಷಗಳ ಹಿಂದೆ ನೆಲಮಂಗಲ ಪೊಲೀಸ್ ಠಾಣೆಯಲ್ಲಿ ಸದರಿ ಸಹಿಯನ್ನು ಪಡೆದಿರುತ್ತಾರೆ. ಯಾವ ಕಾರಣಕ್ಕೆ ಸಹಿ ತೆಗೆದುಕೊಂಡರು ಗೊತ್ತಿಲ್ಲ. ಅದರಲ್ಲಿ ಬರೆದಿರುವ ವಿಷಯ ಗೊತ್ತಿಲ್ಲ.

(ಈ ಸಾಕ್ಷಿಯನ್ನು ಅಭಿಯೋಜಕರು ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

ದಿನಾಂಕ 08.01.2017 ರಂದು ಟಿ. ಬೇಗೂರಿನಲ್ಲಿ ಹಷಿರ್ತ್ ಮೃತಪಟ್ಟಿದ್ದು ಆತನ ಮಣ್ಣಿನ ಕಾರ್ಯಕ್ರಮಕ್ಕೆ ನಾನು ಮತ್ತು ರಾಜು ಹೋಗಿ ಕಾರ್ಯ ಮುಗಿಸಿಕೊಂಡು ಪಲ್ಸರ್ ಬೈಕ್ ನಲ್ಲಿ ಬರುತ್ತಿದ್ದಾಗ ಸುಮಾರು 5.30 ಕ್ಕೆ ರೆಸಿಡೆನ್ಸಿ ಕ್ಲಬ್ ಹಿಂಭಾಗ ದಾಲ್ಮೀಯಾ ಲೇಔಟ್ ನಲ್ಲಿ 15 ಜನ ಹುಟ್ಟಿದ ಹಬ್ಬವನ್ನು ಆಚರಿಸಿಕೊಳ್ಳುತ್ತಿದ್ದಾಗ ಮತ್ತು ಅವರುಗಳನ್ನು ನಮ್ಮನ್ನು ನೋಡಿ ಬಾರೋ ಕೇಕ್ ತಿನ್ನಿರಿ ಎಂದು ಕರೆದರು ಎಂದರೆ ಸರಿ ಅಲ್ಲ. ನಾವಿಬ್ಬರೂ ಅಲ್ಲಿ ಹೋದಾಗ ಅವರು ಕೇಕ್ ಕೊಟ್ಟಿದ್ದು ನಾವು ತಿಂದ ನಂತರ ಅವರವರೆ ಗಲಾಟೆ ಮಾಡಿಕೊಂಡಿದ್ದು ನನಗೆ ಬೈದರು ಎಂದರೆ ಸರಿ ಅಲ್ಲ. ನನಗೆ ಹೊಡೆಯ ಹೋದಾಗ ಆತ ಬಿಡಿಸಿದ್ದು ನಂತರ 3 ಜನರು ನೀನು ಯಾರೋ ಕೇಳಲು ಎಂದು ಬೈದರು ರಾಜುಗೆ ಕೈಗಳಿಂದ ಹೊಡೆದು ಅಲ್ಲೇ ಇದ್ದ ಕಾರಿನಲ್ಲಿ ಹಾಕಿಕೊಂಡು ಕೊಲೆ ಮಾಡುವ ಉದ್ದೇಶದಿಂದ ಒಂದು ಗತಿ ಕಾಣಿಸುತ್ತೇವೆ ಎಂದು ರಾಜುವಿನ ಅಕ್ಕ ಪಕ್ಕ ಕುಳಿತುಕೊಂಡು ಮತ್ತೊಬ್ಬ ಕಾರನ್ನು ಚಾಲನೆ ಮಾಡಿಕೊಂಡು ಹೋಗುವಾಗ ರಾಜುಗೆ ಹೊಡೆದರು ಎಂದರೆ ಸರಿ ಅಲ್ಲ. ರಾಜುವನ್ನು ಕಾರಿನಲ್ಲಿ ಸುತ್ತಾಡಿಸಿ ದೊಣ್ಣೆ, ರಾಡ್ ಮತ್ತು ಕೈಗಳಿಂದ ಹೊಡೆದರು ಎಂದರೆ ಸರಿ ಅಲ್ಲ. ರಾಜು ಕಿರುಚಾಡಿದ್ದರಿಂದ ರಾತ್ರಿ 8.30 ಕ್ಕೆ ಸೊಂಡೇಕೊಪ್ಪ ಗ್ರಾಮದ ಅಶ್ವಥ ಕಟ್ಟೆಯ ಬಳಿ ಕಾರಿನಲ್ಲಿ ಆತನನ್ನು ಕೆಳಗೆ ತಳಿದ್ದರು ಎಂದರೆ ಸರಿ ಅಲ್ಲ. ನಂತರ ಆತನನ್ನು ಆಸ್ಪತ್ರೆಗೆ ಸೇರಿಸಿದ್ದು ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿ ಅಲ್ಲ. ಸದರಿ ಹೇಳಿಕೆಯನ್ನು ನಿಶಾನೆ.ಪಿ.8 ಎಂದು ಗುರುತಿಸಲಾಯಿತು.

ದಿನಾಂಕ 09.01.2018 ರಂದು ಮಧ್ಯಾಹ್ನ 11.15 ರಿಂದ 12.45 ಗಂಟೆಯವರೆಗೆ ನಾನು ತೋರಿಸಿದ ಸ್ಥಳದಲ್ಲಿ ಪೊಲೀಸರು ಪಂಚನಾಮೆಯನ್ನು ಮಾಡಿ, ಓದಿ ಹೇಳಿದ ನಂತರ ಅಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾ ಸಾ 5 ಮತ್ತು 6 ನನ್ನ ಜೊತೆ ಇದ್ದರು ಎಂದರೆ ಸರಿಯಲ್ಲ. ಆರೋಪಿತರೊಂದಿಗೆ ರಾಜೀ ಮಾಡಿಕೊಂಡು ಈಗ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ: ಇಲ್ಲ ಎಂದು ಹೇಳಿರುತ್ತಾರೆ.

**SC No. 140/2024**

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

ಸಹಿ/-
**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.